


ದುಡಿಮೆಯನ್ನೇ ಅರಿಯದ ಸನ್ಯಾಸಿಗೆ ಇದನ್ನು ಕೇಳಿ ಇನ್ನೂ ಆಶ್ಚರ್ಯವಾಯಿತು. ಪರಾವಲಂಬಿಯಾದ ಆತನಿಗೆ ತುತ್ತು ಅನ್ನಕ್ಕಾಗಿ ಯಾವತ್ತೂ ಪರಿತಪಿಸುವ ಸಂದರ್ಭವೇ ಬಂದಿದ್ದಿಲ್ಲ.

ಇನ್ನೂ ಮುಂದೆ ಹೋದಾಗ ಅವರಿಗೆ ಗಂಡ ಹೆಂಡತಿ ಕೈಯಲ್ಲಿ ಒಂದು ಮಗುವನ್ನು ಹಿಡಿದುಕೊಂಡು ಸಂತುಷ್ಟರಾಗಿ ಬರುವುದು ಕಂಡಿತು.

ಸನ್ಯಾಸಿ, "ಯಾರವರು, ಹೆಣ್ಣು ಗಂಡು ಒಟ್ಟೊಟ್ಟಿಗೆ ಬರುತ್ತಿದ್ದಾರಲ್ಲ?!"

"ಅವರೇ? ಅವರು ಸಂಸಾರಿಗಳು. ತುಂಬಾ ಧೈರ್ಯವಂತರು. ಜೀವನದಲ್ಲಿ ಎಷ್ಟೇ ಅಡೆತಡೆಗಳು ಬಂದರೂ ಬದುಕಿಗೆ ಬೆನ್ನು ತೋರಿಸಿ ಓಡುವವರಲ್ಲ, ನಿಂತು ಎದುರಿಸುವವರು. ಒಮ್ಮೊಮ್ಮೆ ಅವರು ಸಂಸಾರ ಸಾಗರದ ಸುಳಿಯಲ್ಲಿ ಸಿಲುಕಿ ನರಳುತ್ತಾರೆ, ಆದರೂ ಎಂದೂ ಅವರು ವೈರಾಗ್ಯಕ್ಕೆ ಸೋಲುವುದಿಲ್ಲ. ಅವರು ಸಂಘಜೀವಿಗಳು, ನೆರೆಹೊರೆಯವರೊಂದಿಗೆ ಬದುಕುತ್ತಾರೆ. ಅವರ ಕೈಯಲ್ಲಿದೆಯಲ್ಲ ಅದು ಅವರ ಮಗು. ಮುಂದೊಂದು ದಿನ ಅದು ಸಾಯುತ್ತದೆ ಅನ್ನುವ ಸತ್ಯ ಅವರಿಗೆ ಅರಿವಿದ್ದರೂ ಸಹ ಸದ್ಯಕ್ಕೀಗ ಅವರು ಆ ಮಗುವಿನ ಹುಟ್ಟನ್ನು ಸಂಭ್ರಮಿಸುತ್ತಿದ್ದಾರೆ. ಅವರೆಂದೂ ಸತ್ಯದ ಹುಡುಕಾಟದಲ್ಲಿ ಮುಳುಗಿ ಖಿನ್ನರಾಗುವುದಿಲ್ಲ. ಅವರು ಬದುಕನ್ನು ಪ್ರೀತಿಸುತ್ತಾರೆ, ಮನಸಿನ ಇಚ್ಛೆಯಂತೆ ಅನುಭವಿಸುತ್ತಾರೆ.''

ಇಲ್ಲಿಯವರೆಗೆ ಒಂಟಿಯಾಗಿಯೇ ಬದುಕಿದ ಸನ್ಯಾಸಿಗೆ ಸಂಸಾರ ಕಂಡು ತಾನೇನೋ ಕಳಕೊಂಡಂತೆ ಅನಿಸಿತು. ತಾನು ಇಲ್ಲಿಯವರೆಗೆ ಏನನ್ನು ಸತ್ಯವೆಂದು ನಂಬಿದ್ದೆನೊ ಅದು ಕಹಿಯನಿಸಿತು.

ತನ್ನ ಬಿಡಾರಕ್ಕೆ ಮರಳುವ ಮುನ್ನ ಆತ ಟ್ಯೂಬ್‌ಲೈಟ್ ಕಂಬವೊಂದರ ಕೆಳಗೆ ಕುಳಿತ. ಧ್ಯಾನಿಸುವುದಕ್ಕಾಗಿ ಅಲ್ಲ, ಆಲೋಚಿಸುವುದಕ್ಕಾಗಿ. ಬದುಕಿಗೆ ಹತ್ತಿರವಾಗಿ ಆಲೋಚಿಸುತ್ತಾ ಹೋದಂತೆ ಅವನಿಗೆ ಜೀವನದ ಬಗ್ಗೆ ಇದ್ದ ನಿರ್ಲಿಪ್ತತೆ, ನಶ್ವರ ಭಾವ, ಒಂದೊಂದಾಗಿ ಕಳಚಿ, ಆಶಾಭಾವ, ಹುಮ್ಮಸ್ಸು ಆವರಿಸುತ್ತಾ ಹೋದವು.

ಮರುದಿನ ಆತ ತನ್ನ ಸನ್ಯಾಸ ಜೀವನ ತೊರೆದು ನಗರದತ್ತ ಹೆಜ್ಜೆ ಹಾಕಿದ. ಕಾಯಕದಲ್ಲಿ ತೊಡಗಿಸಿಕೊಂಡು ಸಂಸಾರಿಯಾದ. ಜನರೀಗ ಅವನನ್ನು ಸನ್ಯಾಸಿ ಅನ್ನುವುದನ್ನು ಬಿಟ್ಟು 'ಸಿದ್ಧಾರ್ಥ' ಎಂದು ಕರೆಯಲು ಶುರುಮಾಡಿದರು.

**ಮುಹಮ್ಮದ್ ಯೂನುಸ್ ಸಾರವಾನ್**

ಬಾಗಲಕೋಟೆಯ ಈ ಯುವ ಲೇಖಕ ಬಸವೇಶ್ವರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಂ.ಟೆಕ್ ದ್ವಿತೀಯ ವರ್ಷದ ವಿದ್ಯಾರ್ಥಿ.